# ಅಂಗೈ ಅಗಲದ ಜಾಗ

**ಅಂಗೈ ಅಗಲದ ಭೂಮಿಯ ಜೀವಶಕ್ತಿ ಬೆರಗು ಮೂಡಿಸುವಂತಹದ್ದು. ಮಣ್ಣಿನೊಂದಿಗಿನ ಒಡನಾಟ ಮೈಮನಗಳನ್ನು ಅರಳಿಸುವಂತದ್ದು. ಆದರೆ, ಮಣ್ಣಿನ ಜೀವಂತಿಕೆಗಿಂತ ಅದರ ಗಾತ್ರದ ಮೇಲೆಯೇ ಮನುಷ್ಯನಿಗೆ ಹೆಚ್ಚು ವ್ಯಾಮೋಹ.**

■ ಎಲ್.ಸಿ. ಸುಮಿತ್ರಾ



ನಮ್ಮ ಪರಿಚಿತರೊಬ್ಬರು ದೊಡ್ಡ ನಗರದಲ್ಲಿ ಇರುವವರು 'ಒಂದು ಅಂಗೈಯಗಲ ಜಾಗ ಸಿಕ್ಕಿದರೂ ಸಾಕು ಮನೆ ಕಟ್ಟಿಕೊಳ್ಳಬಹುದು' ಎಂದು ಹೇಳುತ್ತಿದ್ದರು. ನಮ್ಮ ಹಳ್ಳಿಯಲ್ಲಿ ಯಾರಾದರೂ ಜಮೀನಿನ ಬೇಲಿ ಅಥವಾ ದಾರಿಯ ಜಗಳವಾದರೆ, 'ಏನಪ್ಪ, ಒಂದು ಅಂಗೈ ಅಗಲದ ಜಾಗಕ್ಕೆ ಎಷ್ಟು ಜಗಳ...' ಅನ್ನುತ್ತಿದ್ದರು. ನನಗೇ ಒಬ್ಬರು ಈ ಮಾತು ಹೇಳಿದಾಗ ಅದು ಬೇರೇ ತರಹ ಕೇಳಿಸಿತು.

ಟಾಲ್‌ಸ್ಟಾಯ್ ಎಂಬ ಮಹಾನ್ ಲೇಖಕ **'how much land does a man need'** (ಒಬ್ಬ ಮನುಷ್ಯನಿಗೆ ಎಷ್ಟು ಭೂಮಿ ಬೇಕು) ಎಂಬ ಕತೆ ಬರೆದಿದ್ದಾರೆ. ಆ ಕತೆಯನ್ನು ಓದಿರುವವರು ಸಹ 'ಅದು ಕಥೆ ತಾನೇ, ನಮಗಲ್ಲ' ಎಂದುಕೊಳ್ಳುವುದು ನಡೆದೇ ಇದೆ.

ಕಾಲೇಜ್‌ನಲ್ಲಿ ಬಿಡುವಿನ ವೇಳೆಯಲ್ಲಿ ಸ್ಟಾಫ್ ರೂಂನಲ್ಲಿ ಹರಟೆ ಹೊಡೆಯುವುದು ಸಾಮಾನ್ಯವಾಗಿತ್ತು. ಅಧ್ಯಾಪಕರಿಗೆ ಕೆಲವರಿಗೆ ಜಮೀನು ಕೊಳ್ಳುವ, ಕೃಷಿ ಮಾಡುವ ಆಸೆ. ಕೃಷಿ ಕುಟುಂಬದ ಹಿನ್ನೆಲೆಯವರೇ ಜಾಸ್ತಿ. ಸಹೋದ್ಯೋಗಿ ಒಬ್ಬರು ಮಾದಲ ಹಣ್ಣಿನ ಗಿಡವನ್ನು ತಾವೇ ಕಸಿ ಮಾಡಿದ್ದು ತಂದುಕೊಟ್ಟಿದ್ದರು. ನಿವೃತ್ತಿಯ ನಂತರ ಓದು–ಬರಹದ ಜತೆಗೆ ಗಿಡ ಬೆಳೆಸುವುದು ಇತ್ಯಾದಿಗಳಲ್ಲಿ ಕಾಲ ಕಳೆಯುತ್ತೇನೆ ಅಂದೆ ನಾನು. ತಕ್ಷಣ ಇನ್ನೊಬ್ಬ ಸಹೋದ್ಯೋಗಿ, 'ನಿಮಗೆ ಜಾಗ ಎಲ್ಲಿದೆ?' ಅಂದರು. 'ಅಂಗಳ ಇದೆಯಲ್ಲ' ಅಂದೆ. 'ಅದೆಂತಹುದು ಅಂಗೈ ಅಗಲದ ಜಾಗ' ಅಂದರು. ನಾನು ನಿರುತ್ತರಳಾದೆ. ಆ ಕ್ಷಣ ಸ್ವಲ್ಪ ಅವಮಾನ, ಮುಖಭಂಗ ಅನಿಸಿತು. ಆಮೇಲೆ ತವರು ಮನೆಯ ಸಮೀಪ ಸ್ವಲ್ಪ ಜಾಗ ಕೊಂಡ ಮೇಲೆ ಕೃಷಿ ಮಾಡುವುದು ಎಷ್ಟು ಕಷ್ಟ ಎಂದು ಅರಿವಾಯ್ತು..

ನಮ್ಮದು 60X80 ಅಳತೆಯ ಸೈಟ್. ಕೈತೋಟ ಮಾಡಲು ಇರುವ ಜಾಗವೇ ನನಗೆ ಬೇಕಾದಷ್ಟು. ಈ 'ಅಂಗೈಯಗಲದ ಜಾಗ'ದಲ್ಲಿಯೇ ಗಿಡಗಳನ್ನು ಬೆಳೆಸುವ ನನ್ನ ಆಸೆಯನ್ನು ಪೋಷಿಸಿದ್ದೇನೆ, ಈಡೇರಿಸಿಕೊಂಡಿದ್ದೇನೆ. ಪ್ರತಿದಿನ ಗಿಡದ ಒಣಗಿದ ಎಲೆ, ಹಣ್ಣಾದ ಎಲೆ ತೆಗೆದು, ಬಿದ್ದ ಕೊಂಬೆಗಳನ್ನು ನೆಟ್ಟಗೆ ಮಾಡಿ ನೀರು ಹಾಕಿ, ಆಗಾಗ ಮೇಲ್ಮಣ್ಣು ಕೆದರಿ ಗೊಬ್ಬರ ಹಾಕಿ... ಹೀಗೆ ಸಾಕಷ್ಟು ಕೆಲಸ ಇರುತ್ತದೆ. ನಮ್ಮದು ಮಳೆಯ ಪ್ರದೇಶವಾದುದರಿಂದ ಕಳೆ ತೆಗೆದಷ್ಟು ಬೆಳೆಯುತ್ತದೆ. ಅಂಗೈಯಗಲದ ಜಾಗವೇ ಆದರೂ ದಿನವೂ ಒಂದೆರಡು ಗಂಟೆ ಹೂ ಗಿಡದ